# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 46 ಇಆಇ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು-1 ದಿನಾಂಕ 6ನೇ ಅಗಸ್ಟ್ 2013

## ಸುತ್ತೋಲೆ

ವಿಷಯ: ಗಣಕಯಂತ್ರ ಹಾಗೂ ಇತರೆ ಪರಿಕರಗಳ ಜೀವತಾವಧಿಯನ್ನು ನಿರ್ಧರಿಸುವ ಬಗ್ಗೆ.

ಉಲ್ಲೇಖ: ದಿನಾಂಕ 08.01.2013 ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿಗಳು.

1. ಹಲವಾರು ಇಲಾಖೆಗಳು ತಮ್ಮಲ್ಲಿರುವ ಹಳೆಯ ಗಣಕಯಂತ್ರ ಹಾಗೂ ಇತರೆ ಪರಿಕರಗಳ ಜೀವತಾವಧಿ ಮತ್ತು ವಿಲೇವಾರಿ ಮಾಡುವ ಬಗ್ಗೆ ಸರ್ಕಾರದ ಅಭಿಪ್ರಾಯ/ ಆದೇಶವನ್ನು ನೀಡುವಂತೆ ಕೋರುತ್ತಿವೆ. ಇತರೆ ಅಂಶಗಳೊಂದಿಗೆ, ಹಳೆಯ ಗಣಕಯಂತ್ರ ಮತ್ತು ಇತರೆ ಪರಿಕರಗಳ ವಿಲೇವಾರಿ ಬಗ್ಗೆ, ಈ ಹಿಂದೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ (ಹಿಂದಿನ ಕರ್ನಾಟಕ ಸರ್ಕಾರಿ ಗಣಕ ಕೇಂದ್ರ ) ಕಛೇರಿಯಿಂದ ದಿನಾಂಕ 18.06.1998ರ ಸುತ್ತೋಲೆ ಸಂಖ್ಯೆ ಜಿಸಿಸಿ/ಟಿಎಪಿ/385/97-98ರನ್ವಯ ಕೆಲವು ಮಾರ್ಗಸೂಚಿಗಳನ್ನು ನೀಡಲಾಗಿತ್ತು. ನಂತರ, ಈ ಕುರಿತಂತೆ ಸರ್ಕಾರದ ದಿನಾಂಕ 11.01.2010ರ ಸುತ್ತೋಲೆ ಸಂಖ್ಯೆ ಸಿಆಸುಇ 02 ವಿಮಾಆ 2010ರ ಮೂಲಕ ಕೆಲವು ಸೂಚನೆಗಳನ್ನು ನೀಡಲಾಗಿತ್ತು.

2. ಗಣಕಯಂತ್ರ ಹಾಗೂ ಇತರೆ ಪರಿಕರಗಳ ಜೀವತಾವಧಿಯನ್ನು ನಿರ್ಧರಿಸುವ ಬಗ್ಗೆ ಇತ್ತೀಚೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 08.01.2013ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ವಿವರವಾಗಿ ಚರ್ಚಿಸಿ, ಹಳೆಯ ನಿರುಪಯುಕ್ತ ಗಣಕಯಂತ್ರ ಹಾಗೂ ಇತರೆ ಗಣಕ ಪರಿಕರಗಳ ಜೀವತಾವಧಿ ನಿರ್ಧರಿಸಲು ಹಾಗೂ ವಿಲೇವಾರಿ ಮಾಡಲು ಕೆಳಕಂಡ ಮಾನದಂಡವನ್ನು ಅನುಸರಿಸಬಹುದೆಂದು ನಿರ್ಣಯಸಲಾಯಿತು :-

   (ಅ) ಗಣಕ ಕ್ಷೇತ್ರದಲ್ಲಿ ತಾಂತ್ರಿಕತೆ ತೀವ್ರವಾಗಿ ಬದಲಾವಣೆಯಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, 20% ಸವಕಳಿಯೆಂದು ಪರಿಗಣಿಸಿ, ಗಣಕಯಂತ್ರ, ಯು.ಪಿ.ಎಸ್. ಹಾಗೂ ಇತರೆ ಪರಿಕರಗಳ ಜೀವತಾವಧಿಯನ್ನು ಕನಿಷ್ಠ 5 ವರ್ಷಗಳೆಂದು ಪರಿಗಣಿಸುವುದು.

   (ಆ) ಇಲಾಖೆಗಳು ಗಣಕಯಂತ್ರ, ಯು.ಪಿ.ಎಸ್. ಹಾಗೂ ಇತರೆ ಪರಿಕರಗಳನ್ನು ಖರೀದಿಸಿ ಅಳವಡಿಸಿದ 5 ವರ್ಷಗಳ ನಂತರ, ರಿಪೇರಿ ಮಾಡಲು ಸಾಧ್ಯವಾಗದೇ ಇರುವ/ಹಾಳಾಗಿರುವ ಗಣಕಯಂತ್ರ ಮತ್ತು ಇತರೆ ಪರಿಕರಗಳನ್ನು ನಿರುಪಯುಕ್ತ ವಸ್ತುಗಳೆಂದು ನಿರ್ಣಯಿಸಬಹುದು.

   (ಇ) ದಿನಾಂಕ 7.1.2005ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 39 ಇಜಿವಿ 2004 ಮತ್ತು ದಿನಾಂಕ 15.2.2010ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 147 ಇಆಇ 2009ರನ್ವಯ ನಿಗದಿಪಡಿಸಿದ ಕಾರ್ಯವಿಧಾನದಂತೆ, ಆಯಾ ಇಲಾಖೆಗಳು ಅವುಗಳ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನೆ ಪಡೆಯುವ ಸಂದರ್ಭದಲ್ಲಿ, ವಿಲೆ ಮಾಡಬಹುದಾದ ಗಣಕಯಂತ್ರ ಹಾಗೂ ಇತರ ಪರಿಕರಗಳ ವಿವರಗಳನ್ನು ನೀಡಿ, ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನಾ

ಸಮಿತಿಯ ಹಾಗೂ ಆಯಾ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ತಾಂತ್ರಿಕಾ ಸಲಹಾ ಸಮಿತಿಯ ಅನುಮೋದನೆ ಪಡೆಯತಕ್ಕದ್ದು.

(ಈ) ನಿರುಪಯುಕ್ತ ವಸ್ತುಗಳೆಂದು ನಿರ್ಣಯಿಸಿದ ಗಣಕಯಂತ್ರ, ಯು.ಪಿ.ಎಸ್. ಹಾಗೂ ಇತರೆ ಪರಿಕರಗಳನ್ನು

(1) Buy-back ಅಥವಾ

(2) ಇ-ವೇಸ್ಟ್ ನ್ನು ವಿಲೇವಾರಿ ಮಾಡಲು ಭಾರತ ಸರ್ಕಾರ ನೀಡಿರುವ ಮಾರ್ಗಸೂಚಿಗಳಂತೆ, ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡುವುದು.

3. ಸರ್ಕಾರದ ಇಲಾಖೆಗಳು ಹಳೆಯ ನಿರುಪಯುಕ್ತ ಗಣಕಯಂತ್ರ ಮತ್ತು ಇತರೆ ಗಣಕ ಪರಿಕರಗಳ ಜೀವತಾವಧಿ ನಿರ್ಧರಿಸಲು ಹಾಗೂ ಅವುಗಳ ವಿಲೇವಾರಿ ಮಾಡಲು ಮೇಲಿನ ಕಂಡಿಕೆ 2ರಲ್ಲಿ ನಮೂದಿಸಿದ ಮಾರ್ಗಸೂಚಿಗಳನ್ನು ಪಾಲಿಸಬಹುದೆಂದು ಈ ಮೂಲಕ ತಿಳಿಸಿದೆ.

4. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ಈ ಸುತ್ತೋಲೆಯನ್ನು ಅವರ ವ್ಯಾಪ್ತಿಗೆ ಬರುವ ಇಲಾಖೆಗಳ ಗಮನಕ್ಕೆ ತರಲು ಕೋರಿದೆ.

5. ದಿನಾಂಕ 20.7.2013ರ ಟಿಪ್ಪಣಿ ಸಂಖ್ಯೆ:ಆಇ 548 ವೆಚ್ಚ-12/2013ರನ್ವಯ ಆರ್ಥಿಕ ಇಲಾಖೆ ನೀಡಿದ ಸಹಮತಿಯಂತೆ ಈ ಸುತ್ತೋಲೆಯನ್ನು ಹೊರಡಿಸಿದೆ.

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಇವರು ಈ ಸುತ್ತೋಲೆಯನ್ನು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಪೀಠಾಧಿಕಾರಿ-1, ಸಿಆಸುಇ (ಇ-ಆಡಳಿತ), ಇವರಿಗೆ ಕಳುಹಿಸಲು ಕೋರಿದೆ.

ಪ್ರತಿ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳವರು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗವರು.
3. ಮಹಾಲೇಖಪಾಲಕರು, ಲೆಕ್ಕಪತ್ರ 1 ಮತ್ತು 2, ಕರ್ನಾಟಕ, ಬೆಂಗಳೂರು.
4. ಎಲ್ಲಾ ಇಲಾಖಾ ಮುಖ್ಯಸ್ಥರು.
5. ಶಾಖಾ ರಕ್ಷ ಕಡತ 7ಹೆಚ್ಚುವರಿ ಪ್ರತಿಗಳು.

242

ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

25581383, 25589112
25588151, 25588270
25588142, 25586520

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

**NO:PCB/WMC/2164/E-Waste/CIRCULAR/2017/ 7105 DATED: 18 MAR 2017**

## CIRCULAR TO ALL THE GOVERNMENT DEPARTMENTS

**Sub:** Circular to all the Government Departments as Bulk Consumers under the E-Waste (Management) Rules 2016 - reg.,

*****

Whereas the Government of India, in exercise of the powers conferred by section 6, 8 and 25 of the Environment (Protection) Act, 1986 (29 of 1986) has made the rule herein after called the E-Waste (Management) Rules, 2016. The said Rules is notified on 23.03.2016 and it is came into effect from 1st October 2016 (referred website of SPCB).

Whereas, these Rules shall apply to every manufacturer, producer, consumer, bulk consumer, collection centers, dealers, e-retailer, refurbisher, dismentler and recycle involved in manufacture, sale, transfer, purchase, collection, storage and processing of e-waste or electrical and electronic equipment listed in Schedule 1, including their components, consumables. Parts and spares which make the product operational.

Whereas under section 3(c) of said rule defines "bulk consumer" means bulk users of electrical and electronic equipment such as Central Government or State Government Departments, public sector undertakings, banks, educational institutions, multinational organizations, international agencies partnership and public or private companies that are registered under the Factories Act, 1948 and Companies Act, 2013 and health care facilities which have turnover of more than one crore or have more than twenty employees;

Whereas, this is obligatory to bulk consumer under section 9 (1) of the said Rules shall ensure that e-waste generated by them is channelized to authorized collection centres or dealer of authorized producer or dismantlers or recyclers or is returned to pick up or take back services provided by the producers to authorized dismantlers or recyclers, and under section 9 (2), bulk consumers shall maintain records of e-waste generated by them in Form-2 and make available for scrutiny by the concerned State Pollution Control Board ( SPCB). Filing annual returns in Form 3, to the concerned State Pollution Control Board on or before 30th June following the financial year to which that return relates

All the bulk consumers of electrical and electronic equipment listed in the schedule I are informed to comply the E-Waste (Management) Rules 2016 immediately. Failure to comply the said obligation is punishable of offence under section 15 of the Environment (Protection) Act, 1986.

Sd/-
**MEMBER SECRETARY**

**To:**
a) To the secretaries of all departments, Government of Karnataka.
b) All the heads of the concerned agencies of the Government.

A. Kumar
**SENIOR ENVIRONMENTAL OFFICER**



"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ" AVOID USE OF PLASTICS-BE 'ECO' FRIENDLY

345

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 42 ಡಿಎಸ್‌ವೈ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 12.10.2018

## ಸುತ್ತೋಲೆ

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಳೆಯ ಜೆರಾಕ್ಸ್ ಯಂತ್ರಗಳು, ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳು, ಕುರ್ಚಿ ಮತ್ತು ಟೇಬಲ್‌ಗಳನ್ನು ಖರೀದಿಸಿ ಉಪಯೋಗಿಸಲಾಗುತ್ತಿದ್ದು, ಇವುಗಳು ಸಣ್ಣ ಪುಟ್ಟ ತಾಂತ್ರಿಕ ತೊಂದರೆ ಹಾಗೂ ದುರಸ್ಥಿಗೆ ಒಳಪಟ್ಟಾಗ ಇವುಗಳನ್ನು ರಿಪೇರಿ ಮಾಡಿ ಉಪಯೋಗಿಸುವುದು ಸಹಜ ಪ್ರಕ್ರಿಯೆಯಾಗಿರುತ್ತದೆ. ಆದರೆ ಸದರಿ ಯಂತ್ರೋಪಕರಣಗಳು ಪದೇ ಪದೇ ದುರಸ್ಥಿ ಬಂದಾಗ ಮಾತ್ರ ಇವುಗಳನ್ನು ಅನುಪಯುಕ್ತವೆಂದು ಭಾವಿಸಿ ಇಲಾಖೆಗಳ ಉಗ್ರಾಣಗಳಲ್ಲಿ ಶೇಖರಿಸಲಾಗುತ್ತದೆ.

ದಿನಾಂಕ 11.09.2018 ರಂದು ಮುಖ್ಯ ಕಾರ್ಯದರ್ಶಿಯವರು ವಿಕಾಸಸೌಧ ಹಾಗೂ ಬಹುಮಹಡಿ ಕಟ್ಟಡಗಳ ತಪಾಸಣೆ ನಡೆಸಿದ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಸಚಿವಾಲಯ/ಮಾನ್ಯ ಸಚಿವರುಗಳ ಕಚೇರಿಗಳು ಹಾಗೂ ಸಚಿವಾಲಯದ ಎಲ್ಲಾ ಇಲಾಖೆಗಳಲ್ಲಿ ಜೆರಾಕ್ಸ್ ಯಂತ್ರಗಳು, ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳನ್ನು, ಕುರ್ಚಿ ಮತ್ತು ಟೇಬಲ್‌ಗಳನ್ನು ಖರೀದಿಸಿ, ಬಳಕೆಯಾದ ನಂತರ ಸಣ್ಣ ಪುಟ್ಟ ದುರಸ್ಥಿಗೆ ಒಳಪಟ್ಟಾಗ ಸದರಿ ಉಪಕರಣಗಳನ್ನು ದುರಸ್ಥಿಗೆ ಒಳಪಡಿಸದೇ ಅವುಗಳನ್ನು ಅನುಪಯುಕ್ತವಾದದ್ದೆಂದು ತೀರ್ಮಾನಿಸಿ ಅವುಗಳನ್ನು ಉಗ್ರಾಣದಲ್ಲಿ dump ಮಾಡಿರುವುದನ್ನು ಗಮನಿಸಲಾಗಿದೆ. ಇಂತಹ ಇಲೆಕ್ಟ್ರಾನಿಕ್ ಉಪಕರಣಗಳನ್ನು ದುರಸ್ಥಿಗೊಳಪಡಿಸಿ ಉಪಯೋಗ ಪಡೆಯಬಹುದಾಗಿದ್ದರೂ ಸಹ ಆ ರೀತಿ ಮಾಡದೇ ಇರುವುದನ್ನು ಗಮನಿಸಲಾಗಿದೆ. ಸದರಿ ಉಪಕರಣಗಳ ಬಳಸುವಿಕೆಯ ಮುಂದುವರಿಕೆಯ ಬಗ್ಗೆ ಸಂಬಂಧಪಟ್ಟ ತಾಂತ್ರಿಕ ಸಮಾಲೋಚಕರಿಂದ ಪರಿಶೀಲಿಸಿ, ಅವುಗಳ ಉಪಯುಕ್ತ, ಮೌಲ್ಯ ಮತ್ತು ಬಾಳಿಕೆಯ ಬಗ್ಗೆ ಹಾಗೂ ಇನ್ನಿತರ ತಾಂತ್ರಿಕ ಅಂಶಗಳನ್ನು ಪರಿಶೀಲಿಸಿಕೊಂಡು ಹಾಲಿ ಉಪಯೋಗಿಸುತ್ತಿದ್ದ ಹಳೆಯ ವಸ್ತುಗಳನ್ನು ಸರಬರಾಜುದಾರರಿಗೆ ಹಿಂದಿರುಗಿಸಿ Buy-back ಅಥವಾ Exchange ಡೀಲ್ ಆಧಾರದಲ್ಲಿ ಹೊಸ ವಸ್ತುಗಳನ್ನು ಖರೀದಿಸುವುದು ಅಗತ್ಯವಾಗಿರುತ್ತದೆ.

ಆದುದರಿಂದ, ಅನುಪಯುಕ್ತಗೊಂಡಿರುವ ಹಳೆಯ ಜೆರಾಕ್ಸ್ ಯಂತ್ರಗಳು, ಕಂಪ್ಯೂಟರ್, ಪ್ರಿಂಟರ್, ಕುರ್ಚಿ ಮತ್ತು ಟೇಬಲ್‌ಗಳನ್ನು ಇನ್ನಿತರ ಇಲೆಕ್ಟ್ರಾನಿಕ್ ಯಂತ್ರೋಪಕರಣಗಳನ್ನು ಹೊಸದಾಗಿ ಖರೀದಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಸರಬರಾಜುದಾರರಿಗೆ ಹಿಂದಿರುಗಿಸಿ Buy-back ಅಥವಾ Exchange Offer ನಲ್ಲಿ ಹೊಸ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಖರೀದಿಸಲು ಎಲ್ಲಾ ಇಲಾಖೆಗಳು ಕ್ರಮವಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

(ಬಿ.ಎಸ್. ನಾಗರಾಜ್)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಕಾರ್ಯಕಾರಿ)

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು
3. ಎಲ್ಲಾ ಇಲಾಖಾ ಮುಖ್ಯಸ್ಥರು
4. ಎಲ್ಲಾ ಜಿಲ್ಲಾಧಿಕಾರಿಗಳು